ತೋಟಿ ತಳವಾರ ಕುಳವಾಡಿಗಳ ಭತ್ಯದಲ್ಲಿನ ತಾರತಮ್ಯದ ಬಗ್ಗೆ

೧೬೩೬. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಕಂದಾಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ?

ಅ) ತೋಟಿ ತಳವಾರ ಮತ್ತು ಕುಳುವಾಡಿಗಳಿಗೆ ಅನುಕಂಪ ಭತ್ಯ ನೀಡುತ್ತಿರುವುದರಲ್ಲಿ ತಾರತಮ್ಯವಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ,

ಆ) ಕುಳುವಾಡಿಗಳಿಗೆ ಅನುಕಂಪ ಭತ್ಯ ನೀಡಲಾಗುತ್ತಿದೆಯೇ,

ಇ) ಹಾಗಿದ್ದಲ್ಲಿ ಬೇರೆಯವರಿಗೂ ಅನುಕಂಪ ಭತ್ಯ ನೀಡದಿರಲು ಕಾರಣವೇನು,

ಈ) ಹಳೇ ಮೈಸೂರು ಪ್ರಾಂತ್ಯದ ಕುಳವಾಡಿಗಳಿಗೆ ಈ ಸೌಲಭ್ಯ ವಿಸ್ತರಿಸಲಾಗಿದೆಯೇ,

ಉ) ಹಳೇ ಮೈಸೂರು ಪ್ರಾಂತ್ಯದ ಕುಳುವಾಡಿಗಳಿಗೆ ಅನುಕಂಪ ಭತ್ಯೆ ಕೊಡಲು ವೆಚ್ಚವಾಗುವ ಮೊತ್ತವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಬಂದಿದೆ.

ಆ) ಈಗ ಕೊಡಗು ಜಿಲ್ಲೆಯ ಕುಳವಾಡಿಗಳಿಗೆ ಮಾತ್ರ ಅನುಕಂಪ ಭತ್ಯೆ ಪಾವತಿ ಮಾಡಲಾಗುತ್ತಿದೆ.

ಇ) ತೋಟಿ ತಳವಾರ ಮತ್ತಿತರ ಕೆಳದರ್ಜೆ ಗ್ರಾಮಾಧಿಕಾರಿಗಳಿಗೆ ಅನುಕಂಪ ಭತ್ಯೆ ಮಂಜೂರು ಮಾಡುವಾಗ ಕೊಡಗು ಜಿಲ್ಲೆಯೊಂದನ್ನು ಬಿಟ್ಟು ಬೇರೆ ಜಿಲ್ಲೆಗಳಲ್ಲಿ ಕುಳುವಾಡಿಗಳಿದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿರಲಿಲ್ಲ. ಆದ್ದರಿಂದ ಅನುಕಂಪ ಭತ್ಯೆ ಮಂಜೂರು ಮಾಡಿದ ಆದೇಶದಲ್ಲಿ ಬೇರೆ ಪ್ರದೇಶದ ಕುಳವಾಡಿಗಳ ಹೆಸರನ್ನು ಸೇರಿಸಿಲ್ಲವಾದ್ದರಿಂದ ಅನುಕಂಪದ ಭತ್ಯೆ ಪಾವತಿ ಮಾಡಲಾಗಿಲ್ಲ.

ಈ) ಇಲ್ಲ. ಕುಳುವಾಡಿಗಳಿಗೆ ಅನುಕಂಪ ಭತ್ಯೆ ಪಾವತಿ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಹಳೇ ಮೈಸೂರು ಪ್ರಾಂತ್ಯದ ಕುಳವಾಡಿಗಳಿಗೆ ಅನುಕಂಪ ಭತ್ಯೆಯನ್ನು ಮಂಜೂರು ಮಾಡಿದ ಪಕ್ಷದಲ್ಲಿ ವರ್ಷಕ್ಕೆ ಸುಮಾರು ೪೮ ಲಕ್ಷ ರೂ.ಗಳ ಅಂದಾಜು ವೆಚ್ಚವಾಗುವ ನಿರೀಕ್ಷೆಯಲ್ಲಿದೆ.

ಕಂದಾಯ ಇಲಾಖೆಯಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಸಿಬ್ಬಂದಿಗಳ ಸೇವಾ ಹಿರಿತನ ನಿರ್ಧಾರ

೧೫೧೨. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಕಂದಾಯ ಮಂತ್ರಿಗಳು ದಯವಿಟ್ಟು ಈ ಪ್ರಶ್ನೆಗಳನ್ನು ಉತ್ತರಿಸುವರೆ.

ಅ) ಕಂದಾಯ ಇಲಾಖೆಯಲ್ಲಿ ದಿನಾಂಕ ೨೮-೭-೭೬ರಿಂದಲೇ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಆಡಳಿತ ಸಿಬ್ಬಂದಿಗಳ ಸೇರ್ಪಡೆಯಾಗಿದ್ದರೂ, ಸೇರ್ಪಡೆ ನಿಯಮ ೩ ರಂತೆ ಬೆಂಗಳೂರು ಗುಲ್ಬರ್ಗಾ ವಿಭಾಗಗಳಲ್ಲಿ ಸೇವಾ ಹಿರಿತನ ನಿರ್ಧಾರವಾಗಿದ್ದರೂ ಸಹ, ಶಿರಸ್ತೇದಾರ ಹುದ್ದೆಗೆ ಸಂಬಂಧಿಸಿದ ವಿಭಾಗಾಧಿಕಾರಿಗಳು ಹಾಗೂ ಉಪಾಸ್ತ ಹುದ್ದೆಗೆ ಸಂಬಂಧಿಸಿದ ಜಿಲ್ಲಾಧಿಕಾರಿಗಳು ಮೈಸೂರು ಪಂತಸ್ತ ಬೆಳಗಾಂ ಜಿಲ್ಲೆಗಳಲ್ಲಿ ಯಾವುದೇ ಕ್ರಮ ಕೈಗೊಳ್ಳದೆ ಸೇವಾ ಹಿರಿತನ ಇನ್ನೂ ನಿರ್ಧಾರವಾಗದಿರಲು ಕಾರಣವೇನು ?

ಆ) ಸರಕಾರಿ ಆಜ್ಞೆ ಆರ್‌ಡಿ ೨೨ ಎ. ಟಿ. ಎಸ್. ೮೦ ತಾರೀಖು ೧೪-೧೦-೮೦ ಮತ್ತು ೧೧-೧೨-೮೧ ಪತ್ರ ಸಂಖ್ಯೆ ಡಿ.ಪಿ.ಎ.ಆರ್, ೧೭೪೯ ಎಸ್. ಆರ್. ಎ. ೮೩ ತಾರೀಖು ೭-೮-೮೩ ಪತ್ರ ಸಂಖ್ಯೆ ಆರ್‌ಡಿ ೯೨ ಎಎಸ್‌ಡಿ ೮೪ ದಿನಾಂಕ ೧೩-೨-೮೫ ಮತ್ತು ಆರ್‌ಡಿ ೨೨ ಎಟಿಎಸ್ ೮೪ ದಿನಾಂಕ ೧೫-೭-೮೫ರಲ್ಲಿ ಸರ್ಕಾರದವರು ಸ್ಪಷ್ಟ ನಿರ್ದೇಶನ ನೀಡಿದ್ದರೂ ಕರ್ನಾಟಕ ಉಚ್ಚನ್ಯಾಯಾಲಯದ